ಇ) ಹಾಗಿದ್ದಲ್ಲಿ, ಸರ್ಕಾರ ಇನ್ನು ಮುಂದೆ ಉದ್ಯೋಗ ವಿನಿಮಯ ಕೇಂದ್ರಕ್ಕೆ ನೇಮಕಾತಿ ಜಾಹೀರಾತುಗಳನ್ನು ಕಳುಹಿಸದೇ ವೃತ್ತ ಪತ್ರಿಕೆಗಳ ಮೂಲಕ ಜಾಹೀರಾತು ನೀಡಿದರೆ ನಿರುದ್ಯೋಗಿಗಳಿಗೆ ಸಹಾಯವಾಗುವುದಿಲ್ಲವೆ?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):

ಅ) 94,381 (ಜೂನ್ 1991ರ ಅಂತ್ಯದ ವರೆಗೆ)

ಆ) ಇಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಕೃಷಿ ಕಾರ್ಮಿಕರ ಸಂಖ್ಯೆ.

3694 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿರುವ ಕೃಷಿ ಮತ್ತು ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು?

ಆ) ಇವರುಗಳಿಗೆ ವಿಮಾ ಯೋಜನೆಯನ್ನು ಪ್ರಾರಂಭಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಇ) ಇದ್ದಲ್ಲಿ ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):

ಅ) 1981ರ ಜನಗಣತಿಯ ವರದಿಯ ಮೇರೆಗೆ ರಾಜ್ಯದಲ್ಲಿ 36,55,000 ಕೃಷಿ ಕಾರ್ಮಿಕರು ಮತ್ತು 8,16,900ಕಾರ್ಮಿಕರು ಕೈಗಾರಿಕೆಗಳಲ್ಲಿ ಮತ್ತು ಇತರೇ ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿರುತ್ತಾರೆ.

ಆ) ಇವರುಗಳಿಗೆ ವಿಮಾ ಯೋಜನೆ ಪ್ರಾರಂಭಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

ಇ) ಉಪ ಪ್ರಶ್ನೆ "ಆ" ಯಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ದ.ಕ. ಜಿಲ್ಲೆಯಲ್ಲಿ ವೈದ್ಯರ ಕೊರತೆ.

3708 - ಶ್ರೀ ಬಿ. ರಾಮನಾಥ್ ರೈ (ಬಂಟ್ವಾಳ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಎಷ್ಟು ಆರೋಗ್ಯ ಕೇಂದ್ರಗಳಲ್ಲಿ ವೈದ್ಯರುಗಳ ಕೊರತೆ ಇದೆ?

ಆ) ಸಾಕಷ್ಟು ಸ್ಥಳಗಳಲ್ಲಿ ವೈದ್ಯರುಗಳ ನೇಮಕಾತಿಯಾಗಿದ್ದರೂ ಕೂಡ ಅವರಲ್ಲಿ ಕೆಲಸಕ್ಕೆ ಸೇರ್ಪಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಸರ್ಕಾರವು ಈ ಬಗ್ಗೆ ಕೈಗೊಂಡ ಕ್ರಮವೇನು?

ಈ) ಈ ಪೈಕಿ ಬಂಟ್ವಾಳ ತಾಲ್ಲೂಕಿನ ಆಸ್ಪತ್ರೆಯಲ್ಲಿ ಎಷ್ಟು ವೈದ್ಯರುಗಳ ಕೊರತೆ ಇದೆ. ದನ್ನು ಯಾವಾಗ ತುಂಬಲಾಗುವುದು?

ಶ್ರೀ ಜೆ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲೆಯ 10 ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಹುದ್ದೆ ಖಾಲಿ ಇದೆ.

ಆ) ಹೌದು.

ಇ) ನೇಮಿಸಿದ ಸ್ಥಳದಲ್ಲಿ ಕೆಲಸಕ್ಕೆ ಹಾಜರಾಗದೆ ಇರುವ ವೈದ್ಯರುಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

ಈ) ಬಂಟ್ವಾಳ ತಾಲ್ಲೂಕು ಆಸ್ಪತ್ರೆಯಲ್ಲಿ ಎರಡು ಹುದ್ದೆ ಖಾಲಿ ಇದ್ದು, ಅವುಗಳನ್ನು ಶೀಘ್ರದಲ್ಲಿಯೇ ತುಂಬಲಾಗುವುದು.

ರಾಜ್ಯದಲ್ಲಿರುವ ಅಂಗವಿಕಲರ ಸಂಖ್ಯೆ

3713 - ಶ್ರೀ ಜೆ. ರಾಜುಗೌಡ (ಹನೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ಎಷ್ಟು ಅಂಗವಿಕಲರಿದ್ದಾರೆ?

ಆ) ಇವರ ಉನ್ನತಿಗಾಗಿ ಸರ್ಕಾರವು ಯಾವುದಾದರೂ ಯೋಜನೆ ತಯಾರುಮಾಡಿದೆಯೇ?

ಇ) ಹಾಗಿದ್ದಲ್ಲಿ, ಇದರ ರೂಪರೇಷೆಗಳೇನು?

ಈ) ದೈಹಿಕವಾಗಿ ಅಸಮರ್ಥರಾಗಿರುವ ವಿದ್ಯಾವಂತ ವ್ಯಕ್ತಿಗಳಿಗೆ ಸರ್ಕಾರದ ಯಾವ ಗುಂಪಿನ ಹುದ್ದೆಗಳಿಗೆ ಮೀಸಲಾತಿ ಸೌಲಭ್ಯವನ್ನು ಒದಗಿಸಲಾಗುವುದೇ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) ಅಂಗವಿಕಲರ ಸಮೀಕ್ಷೆ ಇನ್ನೂ ಮುಗಿದಿಲ್ಲವಾದ್ದರಿಂದ ಮಾಹಿತಿ ಲಭ್ಯವಿಲ್ಲ.

ಆ) ಹೌದ.

ಇ) ಪಟ್ಟಿ ಲಗತ್ತಿಸಲಾಗಿದೆ.

ಈ) ಅಂಗವಿಕಲರಿಗೆ ಗುಂಪು 'ಸಿ' ಮತ್ತು 'ಡಿ' ಹುದ್ದೆಗಳಲ್ಲಿ ಶೇಕಡ 4 ರಷ್ಟು ಮೀಸಲಾತಿ ಸೌಲಭ್ಯ ಒದಗಿಸಲಾಗಿದೆ.

ಅನುಬಂಧ

ಅಂಗವಿಕಲರಿಗಾಗಿ ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ಪಟ್ಟಿ:

1) ಅಂಗವಿಕಲ ವಿದ್ಯಾರ್ಥಿಗಳಿಗಾಗಿ ವಿಶೇಷ ಶಾಲೆಗಳು,

2) ಶಿಕ್ಷಣ, ತರಬೇತಿ, ಪುನರ್ವಸತಿ ಯೋಜನೆ ಹಾಗೂ ಅಂಧರಿಗಾಗಿ ಕೈಗಾರಿಕಾ ತರಬೇತಿ ಕೇಂದ್ರ,

3) ಅಂಗವಿಕಲ ನೌಕರರು ಮತ್ತು ತರಬೇತಿದಾರರಿಗೆ ವಸತಿ ನಿಲಯ,

4) ಅಂಗವಿಕಲರಿಗೆ ಮಾಸಿಕ ರೂ. 50-00ಗಳ ಪೋಷಣಾ ಭತ್ಯೆ,

5) ಅಂಗವಿಕಲರಿಗಾಗಿ ಸಾಧನ ಸಲಕರಣೆಗಳನ್ನು ಕೊಳ್ಳಲು ಆರ್ಥಿಕ ನೆರವು ಮತ್ತು ಅಂಗವಿಕಲರಿಗೆ ವಿದ್ಯಾರ್ಥಿ ವೇತನ.

6) ಸ್ವಯಂ ಉದ್ಯೋಗಕ್ಕಾಗಿ ಕರ್ನಾಟಕ ಹಣಕಾಸು ನಿಗಮದ ಮೂಲಕ ರೂ.25,000-00 ರ ತನಕ ಶೇಕಡ 25ರಷ್ಟು ರಿಯಾಯಿತಿಯಲ್ಲಿ ಸಾಲ ಸೌಲಭ್ಯ ವಿತರಣೆ,

7) ಬ್ರೈಲ್ ಮುದ್ರಣಾಲಯ,

8) ವೃದ್ಧರು ಮತ್ತು ಅಬಲರಿಗಾಗಿ ಸಮಾಜ ಸೇವಾ ಸಂಕೀರ್ಣ.